**ಸಿವಿಲ್ ಜಡ್ಜ್ ಮತ್ತು ಜೆ.ಎಂ.ಎಫ್.ಸಿ ನ್ಯಾಯಾಲಯ ತಿ.ನರಸೀಪುರ.**

**ಓ.ಎಸ್. ನಂಃ191/2013 ಡಿ.ಡಬ್ಲೂಃ 01**

ಸಾಕ್ಷಿಯನ್ನು ಇಂದು ದಿನಾಂಕಃ **07.01.2023** ರಂದು ಕರೆಸಿ ಪ್ರಮಾಣ ಮಾಡಿಸಲಾಯಿತು.

**ಮುಂದುವರೆದ ಪಾಟಿ ಸವಾಲುಃ** ವಾದಿ ಪರ ಶ್ರೀ ಕೆ.ಎಸ್.ಎಂ.ಪಿ ವಕೀಲರಿಂದಃ

ನಾನು ಸಲ್ಲಿಸಿರುವ ಪ್ರತಿವಾದ ಪತ್ರದಲ್ಲಿರುವ ಆಸ್ತಿಯ ಚೆಕ್ಕುಬಂಧಿ ಹಾಗೂ ನಾನು ಸಲ್ಲಿಸಿರುವ ನಿಡಿ-17 ಕ್ರಯ ಪತ್ರದ ಚೆಕ್ಕುಬಂಧಿಗೂ ಹೊಂದಾಣಿಕೆ ಇರುವುದಿಲ್ಲ ಎಂದರೆ ನನಗೆ ಗೊತ್ತಿರುವುದಿಲ್ಲ. ನಾನು ಸಲ್ಲಿಸಿದ ಓ.ಎಸ್ ನಂ.149/2016 ರ ತೀರ್ಪಿನ ವಿರುದ್ಧ ಈ ದಾವೆಯ ವಾದಿಯು ಹಿರಿಯ ಸಿವಿಲ್ ನ್ಯಾಯಾಲಯದಲ್ಲಿ ಆರ್.ಎ ನಂ.40/2022 ರಂತೆ ಮೇಲ್ಮನವಿ ಸಲ್ಲಿಸಿರುತ್ತಾರೆ ಎಂದರೆ ಸರಿ. ಸದರಿ ಪ್ರಕರಣ ವಿಚಾರಣೆಗೆ ಬಾಕಿ ಇರುತ್ತದೆ ಎಂದರೆ ಸರಿ. ಸದರಿ ದಾವೆಯಲ್ಲಿ ಕೋರ್ಟು ಕಮಿಷನರರವರು ನಿಡಿ-17 ಕ್ರಯಪತ್ರದ ಆಧಾರದಡಿಯಲ್ಲಿ ನಿಡಿ-10 ವರದಿಯನ್ನು ಸಲ್ಲಿಸಿರುತ್ತಾರೆ ಎಂದರೆ ಸರಿ. ಕ್ರಯ ಪತ್ರದಂತೆ ಚೆಕ್ಕುಬಂಧಿ ಹಾಗೂ ನಕ್ಷೆಯನ್ನು ತಯಾರಿಸಿರುವುದನ್ನು ಹೊರತುಪಡಿಸಿ ಸರ್ವೇ ಇಲಾಖೆಯವರು ಬೇರೆ ಕೆಲಸ ಮಾಡಿರುವುದಿಲ್ಲ ಎಂದರೆ ಸರಿ, ಸಾಕ್ಷಿ ಮುಂದುವರಿದು ಅಳತೆ ಕಾರ್ಯ ಮಾಡಿರುತ್ತಾರೆ ಎಂದು ನುಡಿಯುತ್ತಾರೆ. ಸದರಿ ದಿನ ಅಳತೆ ಕಾರ್ಯ ಮಾಡಿರುವುದಿಲ್ಲ, ದಾಖಲೆಗಳನ್ನು ಮಾತ್ರ ಸೃಷ್ಟಿ ಮಾಡಿರುತ್ತಾರೆ ಎಂದರೆ ಸರಿಯಲ್ಲ. ಸದರಿ ದಿನ ನಾನು ಮತ್ತು ಸರ್ವೆಯವರು ಹೊರತುಪಡಿಸಿ ಬೇರೆಯವರು ಇರಲಿಲ್ಲ ಎಂದರೆ ಸಾಕ್ಷಿ ಗ್ರಾಮದವರು ಮತ್ತು ನಾಗೇಂದ್ರರವರು ಹಾಜರಿದ್ದರು ಎಂದು ನುಡಿಯುತ್ತಾರೆ. ಗ್ರಾಮಸ್ಥರು ಹಾಗೂ ನಾಗೇಂದ್ರರವರು ಸದರಿ ದಿನ ಹಾಜರು ಇಲ್ಲದಿದ್ದರೂ ನಾನು ನ್ಯಾಯಾಲಯದಲ್ಲಿ ಸುಳ್ಳು ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಶ್ರೀ ಬಾಲಜಿ ಬೋರವೆಲ್ ಕೊರೆಯಲು ಸಂಬಂಧಪಟ್ಟ ಇಲಾಖೆಯಿಂದ ಪರವಾನಿಗೆ ಪಡೆದ ಬಾಬ್ತು ನಾನು ವಿಚಾರಿಸಿರುವುದಿಲ್ಲ. ನಿಡಿ-11 ರಲ್ಲಿ ಜಿ.ಎಸ್.ಟಿ ಅಥವಾ ಕೆ.ಎಸ್.ಟಿ ಸಂಖ್ಯೆ ನಮೂದು ಇರುವುದಿಲ್ಲ ಎಂದರೆ ನನಗೆ ಗೊತ್ತಿರುವುದಿಲ್ಲ.

ಸದರಿ ದಿನ ನ್ಯಾಯಾಲಯದ ಕಮಿಷನರರವರು ಈ ಪ್ರಕರಣದ ವಾದಿಗೆ ಸರ್ವೇ ಕಾರ್ಯದ ಬಾಬ್ತು ನೋಟಿಸ್ ಜಾರಿ ಮಾಡಿದ ಬಗ್ಗೆ ಅಂಚೆ ಸ್ವೀಕೃತಿ ದಾಖಲೆಯನ್ನು ಹಾಜರುಪಡಿಸಿರುತ್ತೇನೆ. ಸದರಿ ದಿನ ನ್ಯಾಯಾಲಯದ ಕಮಿಷನರರವರು ನಾನು ಹೇಳಿದಂತೆ ಅಳತೆ ಮಾಡಿರುತ್ತಾರೆ ಎಂದರೆ ಸಾಕ್ಷಿ ಕ್ರಯಪತ್ರದಂತೆ ಅಳತೆ ಮಾಡಿರುತ್ತಾರೆ ಎಂದು ನುಡಿಯುತ್ತಾರೆ. ಕೋರ್ಟು ಕಮಿಷನರ್ ಸಲ್ಲಿಸಿರುವ ವರದಿಯಲ್ಲಿ ದಾವಾ ಆಸ್ತಿಯಲ್ಲಿ ಕೊಳವೆ ಬಾವಿ ಇರುವ ಬಗ್ಗೆ ನಮೂದು ಮಾಡಿರುವುದಿಲ್ಲ ಎಂದರೆ ನನಗೆ ಗೊತ್ತಿರುವುದಿಲ್ಲ.

ನಾನು ಸಲ್ಲಿಸಿರುವ ನಿಡಿ-1 ರಿಂದ 7 ಮತ್ತು ನಿಡಿ-24 ದಾಖಲೆಗಳು ಈ ದಾವೆಗೆ ಸಂಬಂಧಿಸಿರುವ ಪೋಟೋ ಆಗಿರುವುದಿಲ್ಲ ಎಂದರೆ ಸರಿಯಲ್ಲ. ಸದರಿ ಪೋಟೋಗಳನ್ನು ಈ ದಾವೆಯ ಸಲುವಾಗಿ ಸೃಷ್ಟಿ ಮಾಡಿ ನ್ಯಾಯಾಲಯಕ್ಕೆ ಹಾಜರುಪಡಿಸಿರುತ್ತೇನೆ ಎಂದರೆ ಸರಿಯಲ್ಲ. ನ್ಯಾಯಾಲಯದ ಮಧ್ಯಂತರ ಆದೇಶದ ವಿರುದ್ಧವಾಗಿ ನಾನು ಯಾವುದೇ ಕೆಲಸ ಮಾಡಿರುವುದಿಲ್ಲ. ನಿಡಿ-17 ಕ್ರಯ ಪತ್ರದಲ್ಲಿ ತಿಳಿಸಿದಂತೆ ನನ್ನ ಪ್ರತಿವಾದ ಪತ್ರದಲ್ಲಿ 15 ಗುಂಟೆ ಹಾಗೂ 24 ಗುಂಟೆ ಜಮೀನನ್ನು ಪ್ರತ್ಯೇಕವಾಗಿ ತೋರಿಸಿರುವುದಿಲ್ಲ ಎಂದರೆ ಸರಿ. ನಾನು ನನ್ನ ಪ್ರತಿವಾದಪತ್ರದಲ್ಲಿ ತಿಳಿಸಿರುವಂತೆ 10 ಗುಂಟೆ ಹೆಚ್ಚು ಜಮೀನಿನ ಸ್ವಾಧೀನದಲ್ಲಿರುವ ವಿಚಾರವನ್ನು ಕ್ರಯ ಪತ್ರದಲ್ಲಿ ತಿಳಿಸಿರುವುದಿಲ್ಲ ಎಂದರೆ ಸರಿ.

ನಾನು ವಾದಿಗೆ ಸೇರಿದ ಕೊಳವೆ ಬಾವಿಯನ್ನು ಅಕ್ರಮವಾಗಿ ಪಡೆದುಕೊಳ್ಳಲು ನ್ಯಾಯಾಲಯದಲ್ಲಿ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ವಾಸ್ತವವಾಗಿ ನಾನು ಉತ್ತರ ಭಾಗದಲ್ಲಿ ಸ್ವಾಧೀನದಲ್ಲಿದ್ದು, ಪ್ರತಿವಾದಿಗಳು ದಕ್ಷಿಣದ ಭಾಗದಲ್ಲಿ ಸ್ವಾಧೀನದಲ್ಲಿರುತ್ತಾರೆ ಎಂದರೆ ಸಾಕ್ಷಿಯು ವಾದಿಗಳು ಪೂರ್ವಭಾಗದಲ್ಲಿ ಸ್ವಾಧೀನದಲ್ಲಿ ಇರುತ್ತಾರೆ ಎಂದು ನುಡಿಯುತ್ತಾರೆ. ನಾನು ಹಾಜರುಪಡಿಸಿದ ಎಲ್ಲಾ ದಾಖಲೆಗಳು ಈ ದಾವೆಯ ಸಲುವಾಗಿ ಸೃಷ್ಟಿ ಮಾಡಿದ ದಾಖಲೆಗಳು ಎಂದರೆ ಸರಿಯಲ್ಲ.

ಮರುವಿಚಾರಣೆ ಇಲ್ಲ:

ನನ್ನ ಹೇಳಿಕೆಯ ಪ್ರಕಾರ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಗಿದೆ.

ಓ ಹೇ ಕೆ ಸರಿ ಇದೆ.

**ಸಿವಿಲ್ ಜಡ್ಜ್ ಮತ್ತು ಜೆ.ಎಂ.ಎಫ್.ಸಿ,**

**ನ್ಯಾಯಾಲಯ ತಿ.ನರಸೀಪುರ.**